# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 21.05.2022 ರಂದು ಬುಧವಾರ ಸಮಯ ಮಧ್ಯಾಹ್ನ 2.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು,**
**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ನೋಡಲ್ ಅಧಿಕಾರಿಗಳು/ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ. 189, ಹೊಂಗಸಂದ್ರ |
| 3 | ಶ್ರೀ ಕುಮಾರ್ | ಸದಸ್ಯರು |
| 4 | ಶ್ರೀ ನಾಗಭೂಷಣ್ ಆರ್ | ಸದಸ್ಯರು |
| 5 | ಶ್ರೀ ಗಿರೀಶ್. ಎಸ್ | ಸದಸ್ಯರು |
| 6 | ಶ್ರೀ ಮುನಿರಾಜು | ಸದಸ್ಯರು |
| 7 | ಶ್ರೀ ನವೀನ್ | ಪಿ.ಎಸ್.ಐ. ಬೊಮ್ಮನಹಳ್ಳಿ ಪೋಲಿಸ್ ಠಾಣೆ |
| 8 | ಶ್ರೀ ಬಿ.ಎಂ. ಮಹಾದೇವಪ್ಪ | ಎ.ಎಸ್.ಐ. ಬೇಗೂರು ಪೋಲಿಸ ಠಾಣೆ |
| 9 | ಶ್ರೀ ಹೆಚ್ ವೆಂಕಟೇಶ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ:189 ಹೊಂಗಸಂದ್ರ |
| 10 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ:189 ಹೊಂಗಸಂದ್ರ |
| 11 | ಶ್ರೀ ರಮೇಶ್. ಡಿ | ಸ.ಅ. ವಿದ್ಯುತ್ (ಬೀದಿದೀಪ) |
| 12 | ಶ್ರೀ ಮಹೇಶ್ ಕುಮಾರ್ | ಕಿ.ಅ ಬೆಸ್ಕಾಂ |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು, ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಅಧ್ಯಕ್ಷರು/ನೋಡಲ್ ಅಧಿಕಾರಿರವರು ಪ್ರಾರಂಭಿಸಿದರು.

- **ವಿದ್ಯುತ್ ಬೀದಿ ದೀಪ.**

1. ವಾರ್ಡ್ ವ್ಯಾಪ್ತಿಯ ಬೀದಿ ದೀಪದ ಕಂಬಗಳನ್ನು ಅವೈಜ್ಞಾನಿಕವಾಗಿ ಅಳವಡಿಸಿದ್ದು, ಅದರ ಕೆಲವು ವಾಲಿಕೊಂಡಿರುವುತ್ತವೆ ಆದ್ದರಿಂದ ಕೂಡಲೇ ಸರಿಪಡಿಸಬೇಕೆಂದು ಹಾಗೂ ಡಿ.ಪಿ.ಸಿ ಸ್ವಿಚ್ ಮತ್ತು ಟೈಮರ್ ಅಳವಡಿಸಲು ಕೋರಿಕೊಂಡಿರುತ್ತಾರೆ ಮತ್ತು ಕೆಲವು ಕಡೆ (9ನೇ ಮುಖ್ಯರಸ್ತೆ, ಮುನಿಯಪ್ಪ ಲೇಔಟ್) ಈಗಾಗಲೇ ಅಳವಡಿಸಿರುವ ಬೀದಿ ದೀಪಗಳನ್ನು ಸರಿಯಾಗಿ ಹುರಿಯದಿರುವ ಕಾರಣ ಅವುಗಳನ್ನು ರಿಪೇರಿ ಮಾಡಲು ಕೋರಿರುತ್ತಾರೆ ಮತ್ತು ವಾಜ್‌ಪೇಯಿ ಲೇಔಟ್‌ನಲ್ಲಿ ಹೊಸದಾಗಿಬೀದಿ ದೀಪದ ಕಂಬಗಳ ಅಳವಡಿಕೆ ಅವಶ್ಯಕವಿರುತ್ತದೆಂದು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ವಿದ್ಯುತ್ ಬೀದಿದೀಪ ರವರಿಗೆ ನೋಡಲ್ ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

- **ಎಸ್.ಡಬ್ಲ್ಯೂ.ಡಿ ಇಲಾಖೆ.**

1. ಸಭೆಗೆ ಗೈರು ಹಾಜರಾಗಿದ್ದು ಈ ವಿಷಯದ ಸಂಬಂಧ ಯಾವುದೇ ಚರ್ಚೆಯು ನಡೆದಿರುವುದಿಲ್ಲ..

(2...)

Scanned with

- ಅರಣ್ಯ ಇಲಾಖೆ.

2. ಸಭೆಗೆ ಗೈರು ಹಾಜರಾಗಿದ್ದ ಅರಣ್ಯ ಅಧಿಕಾರಿಗಳಿಗೆ ನೋಟಿಸ್ ನೀಡಲು ಕಾರ್ಯದರ್ಶಿಗಳಿಗೆ ಸಭೆಯಲ್ಲಿ ನೋಡಲ್ ಅಧಿಕಾರಿಯವರು ತಿಳಿಸಿದರು/ಸೂಚಿಸಿರುತ್ತಾರೆ.
3. ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದ ಭಾರಿ ಮಳೆಯಿಂದ ಮರಗಳು ರಸ್ತೆಯ ಮೇಲೆ ಬಿದ್ದು ಪಾದಚಾರಿಗಳಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯುಂಟಾಗಿರುತ್ತದೆ ಹಾಗೂ 9ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆಯ ಮರದ ಕೊಂಬೆಗಳನ್ನು ಕತ್ತರಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ ಗಿರೀಶ್ ರವರು ತಿಳಿಸಿದರು. ಆದುದರಿಂದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ನೋಟಿಸ್ ನೀಡಲು ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

- ಕಾಮಗಾರಿ ಇಲಾಖೆ

1. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಇಂದಿನ ಸಭೆಯಲ್ಲಿ ಚರ್ಚಿಸಲಾಗಿ ಈ ಬಗ್ಗೆ ಕಾರ್ಯದರ್ಶಿ/ ವಾರ್ಡ್‌ನ ಸಹಾಯಕ ಅಭಿಯಂತರರು. ರವರು ಸಿಲ್ಟ್ & ಟ್ರಾಕ್ಟರ್ ಕಾಮಗಾರಿಯು ಚಾಲ್ತಿಯಲ್ಲಿದ್ದು ಎಲ್ಲಾ ಕಡೆ ಹೂಳನ್ನು ತೆಗೆದು ಛಾಯಾಚಿತ್ರಗಳನ್ನು ದಿನೆದಿನೆ ಅಪ್‌ಡೇಟ್ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ.
2. ಪ್ರಹರಿ ವಾಹನದ ಸಿಬ್ಬಂಧಿಗಳು ಮಳೆಬಂದಾಗ ಸರಿಯಾದ ಸಮಯಕ್ಕೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ.
3. ಪಾಲಿಕೆಯ ಕ್ರಿಯಾ ಯೋಜನೆಯ ಕಾಮಗಾರಿಗಳ ಕಾರ್ಯಾದೇಶ ನೀಡಿರುವ ಕುರಿತು ಮುಂದಿನ ಸಭೆಯಲ್ಲಿ ಕಡತವನ್ನು ಸ್ಸಲ್ಲಿಸಲು ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.
4. ಮಳೆ ಬಂದಾಗ ನೀರೆತ್ತುವ ಪಂಪ್ ಸೆಟ್‌ಗಳ ಅವಶ್ಯಕತೆಯಿದ್ದು ಅವುಗಳ ಖರಿದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸಲು ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.
5. ಸಭೆಯಲ್ಲಿ ಹಾಜರಿದ್ದ ಶ್ರೀ ಮುನಿರಾಜು ರವರು ಒಂಟಿಮನೆಗಳ ಬಿಲ್ಲಿನ ಪಾವತಿ ಬಗ್ಗೆ ಮಹಿತಿಯನ್ನು ಮುಂದಿನ ಸಭೆಯಲ್ಲಿ ನೀಡಲು ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರವರ ಗಮನಕ್ಕೆ ತಂದರು.

- ಕಂದಾಯ ಇಲಾಖೆ

1. ದಿನಾಂಕ:- 17/05/2022ರಂದು ಬಿದ್ದಿರು ಬಾರಿ ಮಳೆಯಿಂದ ಸುಮಾರು 150-200 ಮನೆಗಳಿಗ ಆಸ್ತಿ ಪಾಸ್ತಿಗೆ ಹಾನಿ ಉಂಟಾಗಿರುತ್ತದೆ. ಅವುಗಳ ವಿವರಗಳ್ನು ಕಂದಾಯ ಇಲಾಖೆಯವರು ಮುಂದಿನ ಕ್ರಮ ಜರುಗಿಸಲು ಮಾಹಿತಿಯನ್ನು ರಿವೆನ್ಯೂ ಇಲಾಖೆಗೆ ಸದರಿ ಮನೆಗಳ ವಿವರಗಳನ್ನು ಪರಿಹಾರ ನೀಡಲು ಕಡತವನ್ನು ಸಲ್ಲಿಸಿರುತ್ತಾರೆಂಬ ಪ್ರಸ್ತಾವನೆಯನ್ನು ಸಭೆಯ ಗಮನಕ್ಕೆ ತರಲಾಗಿರುತ್ತದೆ.

- ಬೊಮ್ಮನಹಳ್ಳಿ ಪೋಲಿಸ್ ಠಾಣೆ

1. ಬ್ರಾಂಡ್ ಫ್ಯಾಕ್ಟರಿ ರಸ್ತೆಯ ಹತ್ತಿರ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಪೋಲಿಸ್ ಬೀಟ್ಸ್ ನಿಯಮಿತವಾಗಿ ನಡೆಸಲು ಮತ್ತು ಸದರಿ ಪ್ರದೇಶಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸಲು ಹಾಗೂ ಈಗಾಗಲೇ ಇರುವ ಕ್ಯಾಮರಗಳನ್ನು ರಿಪೇರಿ ಮಾಡಲು ವಾರ್ಡ್ ಸದಸ್ಯರಾದ ಶ್ರೀ ಕುಮಾರ್ ರವರು ಸಭೆಯಲ್ಲಿ ಹಾಜರಿದ್ದ ಪೋಲಿಸ್ ಅಧಿಕಾರಿಯವರಿಗೆ, ವಾರ್ಡ್ ಕಾರ್ಯದಶಿಗಳು/ನೋಡಲ್ ಅಧಿಕಾರಿಯವರ ಗಮನಕ್ಕೆ ತಂದರು ಅದರಂತೆ ನೋಡಲ್ ಅಧಿಕಾರಿಯವರು ವಾರ್ಡ್ ಸಹಾಯಕ ಅಭಿಯಂತರರಿಗೆ ಮತ್ತು ಶ್ರೀ ನವೀನ್ ಪಿ.ಎಸ್.ಐ ಬೊಮ್ಮನಹಳ್ಳಿ ರವರಿಗೆ ಸೂಚಿಸಿದರು.

- ಬಿ.ಡಬ್ಲ್ಯೂ.ಎಸ್.ಎಸ್.ಬಿ:-

1. ವಾರ್ಡ್ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಅನುಮತಿ ಪಡೆದಿರುವ ಗುತ್ತಿಗೆದಾರರಿಗೆ ಮಾನ್ಯ ನೋಡಲ್ ಅಧಿಕಾರಿಗಳು ದೂರವಾಣಿ ಕರೆ ಮಾಡಿ ತಾವುಗಳು ವಾರ್ಡ್ ವ್ಯಾಪ್ತಿಯಲ್ಲಿ ಕೇಬಲ್ ಅಳವಡಿಸುವ ಮುಂಚೆ ವಾರ್ಡ್ ಸ.ಅ. ರವರ ಗಮನಕ್ಕೆ ತಂದು ರಸ್ತೆ ಅಗೆಯ ತಕ್ಕದ್ದು ಹಾಗೂ ಮುಂದೆ ಕುಡಿಯುವ ನೀರಿನ ಪೈಪ್, ಒಳಚರಂಡಿ ಪೈಪ್, ವಿದ್ಯುತ್ & ಇತರೆ ಪೈಪ್‌ಗಳನ್ನು ಹಾನಿಯಾದ್ದಲ್ಲಿ ತಮ್ಮನೇ ನೇರ ಹೊಣೆಗಾರಾಗಿ ಮಾಡಿ ದಂಡ ವಿಧಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಗುತ್ತಿಗೆದಾರರಿಗೆ ಎಚ್ಚರಿಸಿದರು.

- ಘನತ್ಯಾಜ್ಯ:-

1. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ಔಷದಿ ಮತ್ತು bleaching powder ಸಿಂಪಡಿಸುವಂತೆ ವಾರ್ಡ್ ಸದಸ್ಯರು ಕೋರಿದರು. ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದ್ದರು.

(3.....)

Scanned with

- **ಆರೋಗ್ಯ ಇಲಾಖೆ:**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೋವಿಡ್-19ರ ಪ್ರಯುಕ್ತ ವೈದ್ಯರನ್ನು ನೇಮಿಸಿದ್ದರು. ಕೋವಿಡ್-19 ಇಳಕೆಯಾಗಿರುವುದರಿಂದ ವೈದ್ಯರನ್ನು ತಮ್ಮ ಮಾತೃ ಇಲಾಖೆ ಹಿಂದಿರುಗಿಸಿರುತ್ತಾರೆ. ಆದ್ದರಿಂದ ಖಾಯಂ ವೈದ್ಯರು ಇಲ್ಲದೆ ಇರುವುದರಿಂದ ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಅನಾನೂಕೂಲವಾಗುತ್ತಿದ್ದು, ಆದ್ದರಿಂದ ಖಾಯಂ ವೈದ್ಯರು, ನರ್ಸ್, Lab Technician ಕೊರತೆ ಇದ್ದು, ಇವರನ್ನು ನೇಮಿಸಿಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮಾನ್ಯ ನೋಡಲ್ ಅಧಿಕಾರಿಗಳಲ್ಲಿ ಕೋರಿದ್ದು, ಅದರಂತೆ ಮಾನ್ಯ ನೋಡಲ್ ಅಧಿಕಾರಿ ಆರೋಗ್ಯ ವೈದ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ದೂರವಾಣಿ ಮೂಲಕ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದ್ದು. ವೈದ್ಯಾಧಿಕಾರಿಗಳು ಇಂದು ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ ರವರು ಕೋವಿಡ್-19 ನಾಲ್ಕನೇ ಅಲೆಯ ಬಗ್ಗೆ ಹಾಗೂ ಇತರೆ ವಿಷಯಗಳನ್ನು ಕುರಿತು ಸಭೆಯ ಕರೆದಿದ್ದಾರೆ ಸಭೆಯಲ್ಲಿ ಚರ್ಚಿಸಿದ ನಂತರ ತಮಗೆ ಮಾಹಿತಿ ನೀಡಲಾಗುವುದೆಂದು ಮಾನ್ಯ ನೋಡಲ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಇಲ್ಲಿಯವರೆಗೆ ಯಾವುದು ಕಂಡುಬಂದಿರುವುದಿಲ್ಲ, ಪ್ರತಿ ದಿನ 50 ಕೋವಿಡ್-19 ಪರೀಕ್ಷೆ ನಡೆಸಲಾಗುತ್ತಿದದೆ, 15-16ನೇ ವರ್ಷದವರೆಗೆ ವ್ಯಾಕ್ಸಿನ್ ನೀಡಲಾಗುತಿದ್ದು, ಬೂಸ್ಟರ್ ನೀಡಲು ಆದೇಶವಿರುವುದಿಲ್ಲ. ಖಾಸಗಿ ಆಸ್ಪತ್ರೆಯಲ್ಲಿ ದೊರೆಯುತ್ತದೆ ಎಂದ ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ಕೋವಿಡ್-19ರ ವಿಷಯದ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷಕರು/ನೋಡಲ್ ಅಧಿಕಾರಿಗಳ ಉಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1) ಮಾನ್ಯ ಆಡಳತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯಕ್ತರು, ಬೊಮ್ಮನಹಳ್ಳ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with